731

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜ್ಯಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಅಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ಟ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರದ ಕೋಠಿ	14ನೇ ನವಂಬರ್ 1890	ಹೆಚ್ಚು ಕಡಮೆ	250 ಟನ್‌ಗಳು.
ಶಿವಮೊಗ್ಗಾ ..	ಡಿಟೋ—17ನೇ	ಡಿಟೋ	450 ಡಿಟೋ
ತೀರ್ಥಹಳ್ಳಿ ..	ಡಿಟೋ—22ನೇ	ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು	ಡಿಟೋ—28ನೇ	ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ	ಡಿಟೋ— 4ನೇ	ಡಿಸೆಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟಣ	ಡಿಟೋ—10ನೇ	ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ—15ನೇ	ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು	ಡಿಟೋ—20ನೇ	ಡಿಟೋ	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ಕುಂಡಗಳ 34, 35ನೇ ನಂಬರ್ ಗೆಜೆಟ್‌ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ವೋದಲ್ಪಡುವವು.

ನೋಟಿಸ್.

ತಾರೀಖು 9ನೇ ಅಕ್ಟೋಬರ್ ಸ್ಯ 1890.

ಇದರಿಂದ ತಿಳಿಯಪಡಿಸುವದೇನಂದರೆ ಇನ್ನೊಂದು ಹುಕ್ಕುಂ ಕೊಡುವವರಿಗೂ ಕಡೂರು ಡಿಸ್ಟ್ರಿಕ್ಟು ಬೀರೂರು ಡಿಪೋದಲ್ಲಿ ತೇಗ ಮತ್ತು ಇತರ ತರಹಾ ನಾಟಾಗಳು ಮತ್ತು ಬೊಂಬುಗಳು ಇದರಡೀಲಿ ಕಂಡ ದರಗಳಂತೆ ಬಿಕರಿ ಮಾಡಲ್ಪಡುವವು.

			ರೂ.	ಆ.	ಪೈ.
ತೇಗ ..	ಅವ್ವಲ್ ತರಹಾ	ಸಲೆ ಅಡಿ 1ಕ್ಕೆ	1	11	0
ಡಿಟೋ ..	ದುಯ್ಯಂ ಡಿಟೋ	ಡಿಟೋ	1	7	0
ಡಿಟೋ ..	ಸಿಯ್ಯಂ ಡಿಟೋ	ಡಿಟೋ	1	3	0
ಮನ್ನಾಜಾತಿ ..	ಅವ್ವಲ್ ತರಹಾ	ಡಿಟೋ	1	0	0
ಡಿಟೋ ..	ದುಯ್ಯಂ ಡಿಟೋ	ಡಿಟೋ	0	14	0
ಕಾಡುಜಾತಿ ..	ಅವ್ವಲ್ ಡಿಟೋ	ಡಿಟೋ	0	11	0
ಡಿಟೋ ..	ದುಯ್ಯಂ ಡಿಟೋ	ಡಿಟೋ	0	10	0
ತೇಗದ ಸರಾ ..	..	ಡಿಟೋ	0	15	0
ಕಾಡು ಸರ ..	..	ಡಿಟೋ	0	9	0
ಸಂಣ ಬೊಂಬುಗಳು	(100ಕ್ಕೆ)		6	4	0
ದೊಡ್ಡ ಬೊಂಬುಗಳು ..	ಡಿಟೋ		18	0	0

ಎಲ್. ರಿಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 18ನೇ ಮಾಹೇ 1890.

ನಂ. 1.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಮಾ[illegible] ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯ್ತು 15 ದಿನಗಳೊಳಗಾಗಿ ಪಾವತಿ ಮಾ[illegible] ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಸೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ಯಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಟಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 17ನೇ ಸೆಕ್ಷನ್ ಅನುಸೇರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜು ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯುತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟುವಂತೆ ಎಣಿಸುವ ಜನಗಳು ಹರಾಜು ತಾರೀಖು ಆಗಾಯತು 90 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿವಿಜನ್ನು	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್	ಯಾವ ಬಾಕಿಗೋ ಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕು. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಅ. ಪೈ.	
ಕೋಲಾರ	ಬೇತಮಂಗಲ ಪೋಲೀಸ್ ಬಿಟ್ಟಿ	ಬೇತಮಂಗಲ ಹೋಬಳಿ	ಕಾಯಂಗುತ್ತಾ ಜೊಕ್ಕಹಳ್ಳಿ ಗ್ರಾಮದಲ್ಲಿ 8 ರಲ್ಲಿ ಯೇಳು ಹಿಸ್ಸೆ	ಕೃಷ್ಣಪ್ಪ ವ ಗೈರೆ	23 15 8¼	139 5 6	99 8 5	64 1 4 ಪಾವತಿ ತಾರೀಖು ವರೆಗೆ ಬಡ್ಡಿ ಸಹ ಕೊಡಬೇಕು	ತಾಲ್ಲೂಕು ಕಛೇರಿಯಲ್ಲಿ ಅವ್ಯಲ್‌ದಾರ್ರ ರೂಬರೂ 1890ನೇ ಇಸವಿ ನವೆಂಬರ್ 29ನೇ ತಾರೀಖಿನಲ್ಲಿ
					ಎಕರೆ. ಗುಂಟೆ.				
		ಬಜೆಪಲ್ಲಿ ಹೋಬಳಿ	ಕಾಯಂಗುತ್ತಾ ಆವಲಕೊಂಡರಾಯನಹಳ್ಳಿ	ರಂಗಾಚಾರ್ ರಾಮಾಚಾರ್	179 13	56 5 0	56 5 0	116 12 0 ಡಿಟೋ	ಡಿಟೋ
		ಬಜೆಪಲ್ಲಿ ಹೋಬಳಿ	ಜೋಡಿ ಹೊಸಹಳ್ಳಿ	ರಾಜಾರಾವ್ ವ ಗೈರೆ	689 16	940 1 0	705 3 1	60 4 4 ಡಿಟೋ	ಡಿಟೋ 28 ಡಿಟೋ
		ಬಜೆಪಲ್ಲಿ ಹೋಬಳಿ	ಕಾಯಂಗುತ್ತಾ ರಾಮೇನಹಳ್ಳಿ	ಕಟ್ಟೆ ವಾಸು ದೇವಾಚಾರ್	133 13	54 3 0	54 3 0	118 15 0 ಡಿಟೋ	ಡಿಟೋ 27 ಡಿಟೋ
		ಜಂಗಮಕೋಟೆ ಹೋಬಳಿ	ಜೋಡಿ ಹಾರಡಿ ಗ್ರಾಮ	ಮಲ್ಲಿಕಾರ್ಜುನ ಭಟ್ಟ್ಯ ವಗೈರೆ	928 1	291 3 2	248 3 3	348 0 1 ಡಿಟೋ	ಡಿಟೋ 28 ಡಿಟೋ
		ಬಿಕ್ಕನಹಳ್ಳಿ ಹೋಬಳಿ	ಜೋಡಿ ಅಂದಾರ್ಲಹಳ್ಳಿ ಗ್ರಾಮದಲ್ಲಿನಲವಂಗಲದ ನಂಜುಂಡಶಾಸ್ತ್ರಿ ವೃತ್ತಿ	ದೊಡ್ಡಕೃಷ್ಣಾವಧಾನಿ, ಬ್ರಾಸನಿ ವಾಸಶಾಸ್ತ್ರಿ, ನಂಜುಂಡಶಾಸ್ತ್ರಿ	8 27	11 15 0	10 0 5	81 1 8 ಡಿಟೋ	ಡಿಟೋ ಡಿಟೋ

ಪರಾ.—ಜೋಡೀದಾರರುಗಳೆಂದಲಾಗಲಿ ಯಾ ಕಾಯಂಗುತ್ತಾದಾರರುಗಳಿಂದ ಆಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಾಗಲಿ ದೇಣಿಗೆಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲ.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.